KADW310002152024

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಲಘಟಗಿ .**

**ಅಸಲು ದಾವಾ ಸಂಖ್ಯೆ 83/2024**

**ತೀರ್ಪಿನ ದಿನಾಂಕ:10 ನೇ ಆಗಷ್ಟ 2026**

**ಉಪಸ್ಥಿತರು**
**ಶ್ರೀ ರವೀಂದ್ರ ಎಲ್. ಹೋನೊಲೆ**
**ಬಿ.ಎ., ಎಲ್.ಎಲ್.ಬಿ (ಸ್ಪೇಷಲ್)**
**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಕಲಘಟಗಿ.**

ವಾದಿಯರು : 1. ಶ್ರೀಮತಿ ಗಾಯತ್ರಿ ಕೋಂ ಬಸವರಾಜ,
ಧರೆಪ್ಪನವರ @ ಹೂಲಿಕಟ್ಟಿ,
ವಯಾಃ 35 ವರ್ಷ, ಉಃ ಮನೆಗೆಲಸ,
ಸಾಃ ಪ್ಲಾಟ ನಂ.14, ಶಿಂಧೆ ಪ್ಲಾಟ, ತೆಲಗಾರ ಓಣಿ
ಮುರುಘಾಮಠದ ಹತ್ತಿರ, ಧಾರವಾಡ.

2. ನವಮಿ ತಂದೆ ಬಸವರಾಜ,
ಧರೆಪ್ಪನವರ @ ಹೂಲಿಕಟ್ಟಿ,
ವಯಾಃ 15 ವರ್ಷ, ಉಃ ವಿದ್ಯಾರ್ಥಿನಿ,
ಸಾಃ ಪ್ಲಾಟ ನಂ.14, ಶಿಂಧೆ ಪ್ಲಾಟ, ತೆಲಗಾರ ಓಣಿ
ಮುರುಘಾಮಠದ ಹತ್ತಿರ, ಧಾರವಾಡ.
(ವಾದಿ ನಂ.2 ನೇದವರು ಅಲ್ಪವಯಿ ಇದ್ದು ಅವರ ನೈಸರ್ಗಿಕ ತಾಯಿ ಅಲ್ಪವಯಿ ಸಂರಕ್ಷಣಾದಾರಳಾದ ವಾದಿ ನಂ.1 ನೇದವರಿಂದ ಪ್ರತಿನಿಧಿಸಲ್ಪಡುತ್ತಾರೆ).

**(ಶ್ರೀಮತಿ. ಆರ್ ವಿ. ಕೆಂಗಾನೂರ, ವಕೀಲರು)**

ವಿರುದ್ಧ

ಪ್ರತಿವಾದಿಯರು : 1. ಬಸವರಾಜ ತಂದೆ ಭೀಮಪ್ಪ ಧರೆಪ್ಪನವರ @
ಹೂಲಿಕಟ್ಟಿ ವಯಾಃ 46 ವರ್ಷ, ಉಃ ಶೇತ್ಕಿ ವ
ವ್ಯವಹಾರ, ಸಾಃ ಯಮ್ಮೇಟ್ಟಿ, ತಾಃ ಕಲಘಟಗಿ.
ಜಿಃ ಧಾರವಾಡ.

**(ಪ್ರತಿವಾದಿ ಪರ ವಕೀಲರು- ಶ್ರೀ ಎಮ್ ಎಸ್ ಧನಿಗೊಂಡ)**

| | | | |
|---|---|---|---|
| 1. | ದಾವೆ ಹೂಡಿದ ದಿನಾಂಕ | : | 20-06-2024 |
| 2. | ದಾವೆಯ ಸ್ವರೂಪ | : | ಪಾಲು |
| 3. | ಸಾಕ್ಷಿಯ ವಿಚಾರಣೆ ಪ್ರಾರಂಭವಾದ ದಿನಾಂಕ | : | 22-07-2025 |
| 4. | ತೀರ್ಪು ಘೋಷಿಸಲ್ಪಟ್ಟ ದಿನಾಂಕ | : | 10-08-2026 |

**ತೀರ್ಪು**

ಅಪ್ರಾಪ್ತ ವಯಸ್ಕ 2 ನೇ ವಾದಿ ಮಗಳ ಪರವಾಗಿ ನೈಸರ್ಗಿಕ ತಾಯಿ 1 ನೇ ವಾದಿಯು ದಾವಾ ಆಸ್ತಿಗಳಲ್ಲಿಯ 2 ನೇ ವಾದಿಯ ಕಾನೂನು ಬದ್ಧ ಹಿಸ್ಸೆ ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ.

**ವಾದಿಯರ ದಾವೆಯ ಸಂಕ್ಷಿಪ್ತ ಸಾರಾಂಶಃ**

2. ಕಲಘಟಗಿ ತಾಲೂಕು ದುಮ್ಮವಾಡ ಹೋಬಳಿಯ ಮುತ್ತಗಿ ಗ್ರಾಮದ ಜಮೀನು ರಿ.ಸ.ನಂ. 275-2 ವಿಸ್ತೀರ್ಣ 4 ಎಕರೆ 19 ಗುಂಟೆ ಜಮೀನು ದಾವಾ ಆಸ್ತಿಯಾಗಿರುತ್ತದೆ. (ಇನ್ನು ಮುಂದೆ ಸದರಿ ಜಮೀನನ್ನು ದಾವಾ ಆಸ್ತಿಯೆಂದು ಸಂಬೋಧಿಸಲಾಗುವುದು).

3. 1 ನೇ ವಾದಿ ಮತ್ತು ಪ್ರತಿವಾದಿಯ ಮದುವೆ ದಿನಾಂಕ 10-05-2007 ಧಾರವಾಡ ಜಿಲ್ಲೆ ಕಲಘಟಗಿ ತಾಲೂಕಿನ ಎಮ್ಮೆಟ್ಟಿ ಗ್ರಾಮದಲ್ಲಿ ಹಿಂದೂ ಸಂಪ್ರದಾಯದ ಪ್ರಕಾರ ನೆರವೇರಿರುತ್ತದೆ. 1 ನೇ ವಾದಿ ಹಾಗೂ ಪ್ರತಿವಾದಿಯ ದಾಂಪತ್ಯ ಜೀವನದಿಂದಾಗಿ 2 ನೇ ವಾದಿ ಜನಿಸಿರುತ್ತಾರೆ. ಪ್ರತಿವಾದಿಯು 1 ನೇ ವಾದಿಯ ಸೋದರ ಮಾವ ಅಂದರೆ ತಾಯಿಯ ತಮ್ಮ. ಮದುವೆಯಾದ ನಂತರ ಪ್ರತಿವಾದಿಯು 1 ನೇ ವಾದಿಗೆ ತನ್ನ ಕುಟುಂಬದವರ ಮಾತು ಕೇಳಿ ಕಿರುಕುಳ ನೀಡಿರುತ್ತಾನೆ. 1 ನೇ ವಾದಿಯು ಗರ್ಭಿಣಿಯಾಗಿದ್ದಾಗ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿ ಮನೆಯಿಂದ ಹೊರ ಹಾಕಿರುತ್ತಾನೆ. ಪ್ರತಿವಾದಿ ನೀಡಿದ ಹಿಂಸೆಯಿಂದಾಗಿ 2 ನೇ ವಾದಿಯು ಹುಟ್ಟಿದಾಗಿನಿಂದ ಕಣ್ಣಿನ ಸಮಸ್ಯೆ ಹಾಗೂ ಇತರೆ ಅನಾರೋಗ್ಯದಿಂದ ಬಳಲುತ್ತಿದ್ದಾಳೆ. 2 ನೇ ವಾದಿ ಜನಿಸಿದ ನಂತರ ವಾದಿಯರು ಪ್ರತಿವಾದಿಯ ಮನೆಗೆ ಹೋದಾಗ ಹೆಣ್ಣು ಮಗುವನ್ನು ಹೆತ್ತಿರುವೆ ಅದು ರೋಗ ಪೀಡಿತವಾಗಿದೆ ಎಂದು ಕುಟುಂಬದವರು ಎಲ್ಲರೂ ಸೇರಿಕೊಂಡು ತೊಂದರೆ ನೀಡಿರುತ್ತಾರೆ. 1 ನೇ ವಾದಿಯು ಪ್ರತಿವಾದಿ ಹಾಗೂ ಅವರ ಕುಟುಂಬದರು ನೀಡಿದ ತೊಂದರೆಯನ್ನು ಸಹಿಸಿಕೊಂಡು ಜೀವನ ನಡೆಸಿದ್ದು ವಿನಾಕಾರಣ ತೊಂದರೆ ನೀಡಿ ಮನೆಯಿಂದ ಹೊರಹಾಕಿದ್ದರಿಂದ ತವರು ಮನೆಗೆ ಹೋಗಿ ವಾಸವಾಗಿರುತ್ತಾರೆ. 1 ನೇ ವಾದಿಯ ತಂದೆ ಮರಣ ಹೊಂದಿದ್ದು ಆದಾಯದ ಮೂಲಗಳು ಇರುವುದಿಲ್ಲ.

ಆದ್ದರಿಂದ ಜೀವನ ನಿರ್ವಹಣೆ ಚಿಕಿತ್ಸಾ ವೆಚ್ಚ ಹಾಗೂ ಶಿಕ್ಷಣದ ಖರ್ಚು ನೀಗಿಸುವುದು ಸಾಧ್ಯವಾಗುತ್ತಿಲ್ಲ. ಪ್ರತಿವಾದಿಯು ತನ್ನ ಕರ್ತವ್ಯದಿಂದ ವಿಮುಖನಾಗಿರುತ್ತಾನೆ.

4. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದು ಪ್ರತಿವಾದಿ ಹಾಗೂ ಆತನ ಸಹೋದರಿ ಅಸಲು ದಾವಾ ನಂ. 14-2019 ನ್ನು ಸಲ್ಲಿಸಿದ್ದು ದಾವೆ ಡಿಕ್ರಿಯಾಗಿದ್ದು ನಂತರ ಇದೇ ನ್ಯಾಯಾಲಯದಲ್ಲಿ ಎಫ್ ಡಿ ಪಿ ನಂ. 16-2022 ನ್ನು ಸಲ್ಲಿಸಿ ಡಿಕ್ರಿ ಮಾಡಿಕೊಂಡಿರುತ್ತಾರೆ. ರಾಜಿ ಡಿಕ್ರಿ ಪ್ರಕಾರ ದಾವಾ ಆಸ್ತಿಗಳು ಪ್ರತಿವಾದಿಯ ಹಿಸ್ಸೆಗೆ ಬಂದಿರುತ್ತವೆ. ದಾವಾ ಆಸ್ತಿಗಳಲ್ಲಿ 2 ನೇ ವಾದಿಯು ಸಮಪಾಲು ಹೊಂದಿರುತ್ತಾಳೆ. ಪ್ರತಿವಾದಿಯು ದುಶ್ಚಟಗಳಿಗೆ ಬಲಿಯಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡಲು ಪ್ರಯತ್ನಿಸಿರುತ್ತಾನೆ. ದಿನಾಂಕ 30-05-2024 ರಂದು ಹಿರಿಯರ ಮುಖಾಂತರ ಪ್ರತಿವಾದಿಯನ್ನು ದಾವಾದ ಆಸ್ತಿಗಳಲ್ಲಿಯ 2 ನೇ ವಾದಿಯ ಹಿಸ್ಸೆಯನ್ನು ನೀಡುವಂತೆ ಕೇಳಿದಾಗ ನಿರಾಕರಿಸಿರುತ್ತಾನೆ. ಆದ್ದರಿಂದ ದಾವೆ ಸಲ್ಲಿಸಲು ವಾಜ್ಯ ಕಾರಣ ಉಂಟಾಗಿರುತ್ತದೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಯಾಗಿದ್ದು ಅದರಲ್ಲಿ 2 ನೇ ವಾದಿಯು ಅರ್ಧ ಹಿಸ್ಸೆಯನ್ನು ಹೊಂದಿರುತ್ತಾರೆ. ಆದ್ದರಿಂದ, ದಾವಾ ಅಸ್ತಿಯಲ್ಲಿಯ ವಾದಿಯ ಪಾಲನ್ನು ವಿಂಗಡಿಸಿ ಕೊಡಬೇಕು ಎಂದು ಕೇಳಿಕೊಂಡಿರುತ್ತಾರೆ.

5. ದಾವೆ ಸಲ್ಲಿಸಿದ ನಂತರ ಪ್ರತಿವಾದಿಗೆ ಸಮನ್ಸ ಜಾರಿಯಾದ ನಂತರ ತಮ್ಮ ಪರ ವಕೀಲರ ಮುಖಾಂತರ ಹಾಜರಾಗಿ ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ. ಪ್ರತಿವಾದ ಪತ್ರದಲ್ಲಿ ದಾವೆಯು ಆಧಾರ ರಹಿತವಾಗಿದ್ದು ವಜಾ ಮಾಡಲು ಯೋಗ್ಯವಾಗಿರುತ್ತದೆ. ನಿಜ ಸಂಗತಿಗಳನ್ನು ಮರೆಮಾಚಿ ದಾವೆ ಸಲ್ಲಿಸಿರುತ್ತಾರೆ. ದಾವೆಯಲ್ಲಿ ತೋರಿಸಿದ ವಂಶಾವಳಿಯನ್ನು ಒಪ್ಪಿಕೊಂಡಿರುತ್ತಾರೆ. ತನ್ನ ಹಾಗೂ ವಾದಿಯರ ಮಧ್ಯದ ಸಂಬಂಧವನ್ನು ಒಪ್ಪಿ ಕೊಂಡಿದ್ದು 1 ನೇ ವಾದಿಗೆ ಹಿಂಸೆ ನೀಡಿ ಮನೆಯಿಂದ ಹೊರ ಹಾಕಿರುವುದನ್ನು ಅಲ್ಲಗಳೆದಿರುತ್ತಾರೆ. ಅದೇ ರೀತಿ 1 ನೇ ವಾದಿಗೆ 2 ನೇ ವಾದಿಯು ಜನಿಸಿದ ನಂತರ ಹಿಂಸೆ ನೀಡಿರುವುದನ್ನು ಅಲ್ಲಗಳೆದಿರುತ್ತಾರೆ. ತಾನು ಹಾಗೂ ತನ್ನ ಕುಟುಂಬದವರು 1 ನೇ ವಾದಿಗೆ ಹಿಂಸೆ ನೀಡಿ ಮನೆಯಿಂದ ಹೊರ ಹಾಕಿರುವುದನ್ನು ಅಲ್ಲಗಳೆದಿರುತ್ತಾರೆ. ವಾದಿಯರನ್ನು ಜೋಪಾನ ಮಾಡಲು ನಿರ್ಲಕ್ಷಿಸಿರುವುದನ್ನು ಹಾಗೂ ತನ್ನ ಕರ್ತವ್ಯದಿಂದ ವಿಮುಖವಾಗಿರುವುದನ್ನು ಅಲ್ಲಗಳೆದಿರುತ್ತಾರೆ. ದಾವಾ ಆಸ್ತಿ ಪಿತ್ರಾರ್ಜಿತ ಅಸ್ತಿಯಾಗಿದ್ದು ಅದರಲ್ಲಿ 1 ನೇ ವಾದಿಗೆ ಅರ್ಧ ಹಿಸ್ಸೆ ಇದೆ ಎನ್ನುವುದನ್ನು ಅಲ್ಲಗಳೆದಿರುತ್ತಾರೆ. ಮುಂದುವರಿದು, ದಾವಾ ಆಸ್ತಿಯ ಚಕಬಂದಿ ಪೂರ್ವಕ್ಕೆ-ಹಳ್ಳ, ಪಶ್ಚಿಮಕ್ಕೆ-ಚಂಬಯ್ಯ ತಾರಿಹಾಳ ಇವರ ಜಮೀನು, ಉತ್ತರಕ್ಕೆ-ಪಾರ್ವತಿ ಉಪ್ಪಾರ ಇವರ ಜಮೀನು, ದಕ್ಷಿಣಕ್ಕೆ- ರಾಮಪ್ಪ ಎಮ್ಮೆಟ್ಟಿ ಮತ್ತು ಇತರರ ಜಮೀನು ಇದ್ದು. ಸದರಿ ದಾವಾ

ಆಸ್ತಿ ಅಸಲ ದಾವಾ ನಂ. 14-2019 ಹಾಗೂ ಎಫ್ ಡಿ ಪಿ ನಂ.16-2022 ರಲ್ಲಿ ಆದ ರಾಜಿ ಡಿಕ್ರಿ ಪ್ರಕಾರ ಪ್ರತಿವಾದಿಗೆ ಪ್ರಾಪ್ತವಾಗಿರುತ್ತದೆ. ಮುಂದುವರಿದು, ಸುಮಾರು 14 ವರ್ಷಗಳ ಹಿಂದೆ 1 ನೇ ವಾದಿಯು 2 ನೇ ವಾದಿಯನ್ನು ಕರೆದುಕೊಂಡು ಮನೆ ಬಿಟ್ಟು ಹೋಗಿದ್ದು ಹಿರಿಯರ ಸಮಕ್ಷಮ 1 ನೇ ವಾದಿಯು ನಾನು ಪ್ರತಿವಾದಿಯ ಜೊತೆಗೆ ಬಾಳುವೆ ಮಾಡುವುದಿಲ್ಲ ಬೇರೆ ಲಗ್ನ ಮಾಡಿಕೊ ಎಂದು ಬಿಟ್ಟು ಹೋಗಿರುತ್ತಾಳೆ. ಆದ್ದರಿಂದ ಪ್ರತಿವಾದಿಯು ಮಂಜುಳಾ ಎನ್ನುವವರನ್ನು ವಿವಾಹ ಆಗಿದ್ದು ಅವರ ವೈವಾಹಿಕ ಜೀವನದಿಂದಾಗಿ ಅಶ್ವಿನಿ ಮತ್ತು ಅಮೃತ ಎಂಬ ಎರಡು ಜನ ಹೆಣ್ಣು ಮಕ್ಕಳು ಜನಿಸಿರುತ್ತಾರೆ. ವಾದಿಯು ದಾವೆಯಲ್ಲಿ ತೋರಿಸಿದ ವಂಶಾವಳಿ ತಪ್ಪಾಗಿರುತ್ತದೆ. 2 ನೇ ಹೆಂಡತಿ ಹಾಗೂ ಮಕ್ಕಳನ್ನು ವಂಶಾವಳಿಯಲ್ಲಿ ತೋರಿಸಿಲ್ಲ. ವಾದಿಯರು ಸಲ್ಲಿಸಿದ ದಾವೆ ಕಾನೂನಿನಡಿ ಊರ್ಜಿತವಲ್ಲ. ಆದ್ದರಿಂದ ವಾದಿಯರು ಸಲ್ಲಿಸಿದ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು ಕೇಳಿಕೊಂಡಿರುತ್ತಾರೆ.

6. ವಾದ ಪತ್ರ, ಪ್ರತಿವಾದ ಪತ್ರ ಮತ್ತು ಕಡತದಲ್ಲಿನ ಇತರೇ ದಾಖಲೆಗಳನ್ನು ಪರಿಗಣಿಸಿ ಈ ನ್ಯಾಯಾಲಯವು ಈ ಕೆಳಗಿನ ವಿವಾದಾಂಶಗಳನ್ನು ರಚಿಸಿದ್ದು ಇರುತ್ತದೆ.

## ವಿವಾದಾಂಶಗಳು

1. Whether the plaintiff proves that suit schedule property is ancestral joint family properties of plaintiff No.2 and defendant?
2. Whether the defendant proves that the suit of the plaintiffs is bad for non joinder of necessary parties?
3. Whether the plaintiffs are entitled for the relief as sought for?
4. What order or decree?

7. ವಾದಿಯರು ತಮ್ಮ ಪ್ರಕರಣವನ್ನು ರುಜುವಾತು ಪಡಿಸಲು 1 ನೇ ವಾದಿಯು ತನ್ನನ್ನು ಪಿಡಬ್ಲೂ-1 ಎಂದು ವಿಚಾರಣೆ ಮಾಡಿಕೊಂಡಿದ್ದು ನಿಶಾನೆ ಪಿ-1 ರಿಂದ 31 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

8. ಪ್ರತಿವಾದಿ ತನ್ನ ಪ್ರಕರಣವನ್ನು ರುಜುವಾತು ಪಡಿಸಲು ತನ್ನನ್ನು ಡಿಬ್ಲೂ-1 ಎಂದು ವಿಚಾರಣೆ ಮಾಡಿಕೊಂಡಿದ್ದು ನಿಶಾನೆ ನಿಡಿ-1 ರಿಂದ 16 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

9. ಈ ಮೇಲಿನ ವಿವಾದಾಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿದೆ.

ವಿವಾದಾಂಶ 1: ಸಕಾರಾತ್ಮಕವಾಗಿ

ವಿವಾದಾಂಶ 2: ನಕಾರಾತ್ಮಕವಾಗಿ

ವಿವಾದಾಂಶ 3: ಸಕಾರಾತ್ಮಕವಾಗಿ

ವಿವಾದಾಂಶ 4: ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ.

## ಕಾರಣಗಳು

10.**ವಿವಾದಾಂಶ ನಂ.1:** ವಾದಿಯರ ಪ್ರಕರಣವೇನೆಂದರೆ 1 ನೇ ವಾದಿಯು ಪ್ರತಿವಾದಿಯ ಹೆಂಡತಿ ಹಾಗೂ 2 ನೇ ವಾದಿ ಮಗಳು. ವಾದಿಯರು ಹಾಗೂ ಪ್ರತಿವಾದಿಯ ಮಧ್ಯದ ಸಂಬಂಧ ಒಪ್ಪಿ ಕೊಂಡಿರುವ ಸಂಗತಿ. ಆದ್ದರಿಂದ ಈ ಬಗ್ಗೆ ಹೆಚ್ಚಿನ ಚರ್ಚೆ ಅನಗತ್ಯ ಎಂದು ಭಾವಿಸುತ್ತೇನೆ.

11. ವಾದಿಯರ ಪ್ರಕರಣ ಎನೆಂದರೆ ದಾವಾ ಆಸ್ತಿಗಳು ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳು. ಪ್ರತಿವಾದಿ ಹಾಗೂ ಅವರ ಸಹೋದರ ಮತ್ತು ಸಹೋದರಿಯರ ಮಧ್ಯ ಅಸಲ ದಾವಾ ನಂ. 14-2019 ರಂತೆ ಕುಟುಂಬದ ಆತ್ತಿಸ್ತಿಗಳಲ್ಲಿ ದಾವೆ ನಡೆದಿದ್ದು ಸದರಿ ದಾವೆ ಡಿಕ್ರಿ ಆಗಿದ್ದು ನಂತರ ಎಫ್ ಡಿ ಪಿ ನಂ.16-2022 ನ್ನು ಸಲ್ಲಿಸಿದ್ದು ಅದರಲ್ಲಿ ಆದ ರಾಜಿ ಡಿಕ್ರಿ ಪ್ರಕಾರ ದಾವಾ ಆಸ್ತಿ ಪ್ರತಿವಾದಿಯ ಪಾಲಿಗೆ ಬಂದಿರುತ್ತದೆ. ಸದರಿ ಆಸ್ತಿ ಪಿತ್ರಾರ್ಜಿತ ಆಸ್ತಿಯಾಗಿದ್ದು 2 ನೇ ವಾದಿಗೆ ಅರ್ಧ ಪಾಲು ಇರುತ್ತದೆ. ತಮ್ಮ ಪ್ರಕರಣವನ್ನು ರುಜುವಾತು ಪಡಿಸುವ ಸಲುವಾಗಿ 1 ನೇ ವಾದಿ ತನ್ನನ್ನು ಪಿಡಬ್ಲೂ-1 ಎಂದು ವಿಚಾರಣೆ ಮಾಡಿಕೊಂಡಿದ್ದು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ವಾದ ಪತ್ರದಲ್ಲಿಯ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ. ತಮ್ಮ ಪ್ರಕರಣಕ್ಕೆ ಪೂರಕವಾಗಿ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

12. ವಾದಿಯರು ಹಾಜರು ಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ನಿಪಿ-1 ಪಹಣಿ ಪತ್ರಿಕೆ, ಮುತ್ತಗಿ ಗ್ರಾಮದ ಸರ್ವೆ ನಂ. 275/*/2 ವಿಸ್ತೀರ್ಣ 4 ಎಕರೆ 19 ಗುಂಟೆ ಜಮೀನು ಪ್ರತಿವಾದಿ ಹೆಸರಿನಲ್ಲಿ ಕಬ್ಜೆದಾರ ಹಾಗೂ ಸ್ವಾಧೀನದಾರ ಎಂದು ಹೆಸರು ದಾಖಲಾಗಿರುತ್ತದೆ. ನಿಪಿ-2 ಮುಟೇಷನ್ ರಜಿಸ್ಟರ ಪ್ರತಿ, ನಿಪಿ-3 ಎಫ್ ಡಿ ಪಿ ನಂ. 16-2022 ರಲ್ಲಿಯ ಅರ್ಜಿಯ ಪ್ರತಿ, ನಿಪಿ-4 ಆರ್ಡರ ಸೀಟ, ನಿಪಿ-5 ರಾಜಿ ಡಿಕ್ರಿ ಪ್ರತಿ, ನಿಪಿ-6 ರಾಜಿ ಅರ್ಜಿಪತ್ರ, ನಿಪಿ-7 ಮೃತರ ಕುಟುಂಬದ ಜೀವಂತ ಸದಸ್ಯರ ದೃಡಿಕರಣ ಪತ್ರ, ನಿಪಿ-8 ಕಾರ್ಯದರ್ಶಿ, ಗ್ರಾಮ ಪಂಚಾಯತಿ, ಗಂಭ್ಯಾಪುರರವರು ನೀಡಿದ 1 ನೇ ವಾದಿಯ ರಹವಾಸಿ ಪ್ರಮಾಣ ಪತ್ರ, ನಿಪಿ-9 2 ನೇ ವಾದಿಯ ಜನನ ಪ್ರಮಾಣ ಪತ್ರ, ನಿಪಿ-10 ಶ್ರೀ ಕೃಷ್ಣ ಮಕ್ಕಳ ಆಸ್ಪತ್ರೆಯವರು ನೀಡಿದ ಅಸ್ಪತ್ರೆಯ ಪಾಸ ಬುಕ್, ನಿಪಿ-11 ರಿಂದ 13 ಪರೀಕ್ಷಾ ವರದಿಗಳು ಹಾಗೂ ಕಣ್ಣಿನ ಆಸ್ಪತ್ರೆಯವರು ನೀಡಿದ ಭೇಟಿಯ ವಿವರ ಪತ್ರ, ನಿಪಿ-14 ರಿಂದ 16, 2 ನೇ ವಾದಿಯ ಪೋಟೊಗಳು, ನಿಪಿ-17 ರಿಂದ 21 ಜ್ಞಾನ ಜ್ಯೋತಿ ವಿದ್ಯಾಲಯ ಧಾರವಾಡರವರು ನೀಡಿದ ಫೀ ಸಂದಾಯ ಮಾಡಿದ

ರಸೀದಿಗಳು, ನಿಪಿ-22 ರಿಂದ 25 ಆಸ್ಪತ್ರೆಯವರು ನೀಡಿದ ಬಿಲ್ಲಗಳು, ನಿಪಿ-26 ಔಷದ ಚೀಟಿ, ನಿಪಿ-27,30 ಧರ್ಮಸ್ಥಳ ಅಸ್ಪತ್ರೆಯವರು ನೀಡಿದ ನೋಂದಣಿ ಪತ್ರ, ನಿಪಿ-28 ಮತ್ತು 31 ಅಸ್ಪತ್ರೆಯವರಿಗೆ ನೀಡಿದ ಮನವಿ ಪತ್ರ, ನಿಪಿ-29 ಸಾರ್ವಜನಿಕ ಪ್ರಕಟಣೆ ಪ್ರತಿ.

13. ಪ್ರತಿವಾದಿ ಪರ ವಕೀಲರು ಪಿಡಬ್ಲೂ-1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು ಪ್ರತಿವಾದಿಯವರೊಂದಿಗೆ ಸಂಸಾರ ಮಾಡಲು ನಿರಾಕರಿಸಿ ತವರು ಮನೆಗೆ ಹೋಗಿರುವುದನ್ನು ಅಲ್ಲಗಳೆದಿರುತ್ತಾರೆ. ಸುಮಾರು 14 ವರ್ಷಗಳಿಂದ ವಾಸವಾಗಿರುವುದನ್ನು ಒಪ್ಪಿ ಕೊಂಡಿರುತ್ತಾರೆ. ಪ್ರತಿವಾದಿಯು ತನ್ನಗೆ ಇಷ್ಟ ಇಲ್ಲ ಎಂದು ಅತನನ್ನು ಬಿಟ್ಟು ಹೋಗಿರುವುದನ್ನು ಅಲ್ಲಗಳೆದಿರುತ್ತಾರೆ. ನಗರ ಪ್ರದೇಶದಲ್ಲಿ ವಾಸವಾಗಿರುವುದರಿಂದ ಪ್ರತಿವಾದಿಯೊಂದಿಗೆ ಸಂಸಾರ ಮಾಡಲು ನಿರಾಕರಿಸಿರುವುದನ್ನು ಅಲ್ಲಗಳೆದಿರುತ್ತಾರೆ. ಅದೇ ರೀತಿ ಪ್ರತಿವಾದಿಗೆ ಬೇರೆ ಮದುವೆ ಮಾಡಿಕೊಳ್ಳಲು ಸೂಚಿಸಿರುವುದನ್ನು ಅಲ್ಲಗಳೆದಿರುತ್ತಾರೆ. ಸದರಿ ಸಂಗತಿಗಳು ದಾವೆಯ ವಿವಾದಾಂಶಕ್ಕೆ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ. ಆದ್ದರಿಂದ ಈ ಬಗ್ಗೆ ಹೆಚ್ಚಿನ ಚರ್ಚೆ ಅನಗತ್ಯ ಎಂದುಭಾವಿಸುತ್ತೇನೆ. ಪಿಡಬ್ಲೂ-1 ರವರು ಮುಂದುವರಿದ ಪಾಟೀ ಸವಾಲಿನಲ್ಲಿ ಪ್ರತಿವಾದಿಗೆ 4 ಎಕರೆ 17 ಗುಂಟೆ ಜಮೀನು ಪಾಲಿನಲ್ಲಿ ಬಂದಿರುವುದನ್ನು ಒಪ್ಪಿ ಕೊಂಡಿರುತ್ತಾರೆ. ಪ್ರತಿವಾದಿ ತನ್ನ ಪಾಲಿನ ಜಮೀನನ್ನು ಲಾವಣಿಗೆ ಕೊಟ್ಟು ಹುಬ್ಬಳ್ಳಿಯಲ್ಲಿ ವಾಸವಾರುತ್ತಾನೆ ಎಂದು ಒಪ್ಪಿ ಕೊಂಡಿರುತ್ತಾರೆ. ಇನ್ನುಳಿದಂತೆ ಪ್ರತಿವಾದಿಯ ಮೇಲೆ ಸುಳ್ಳು ಆಪಾದನೆ ಮಾಡಿ ದಾವೆ ಸಲ್ಲಿಸಿರುವುದನ್ನು ಅಲ್ಲಗಳೆದಿರುತ್ತಾರೆ.

14. ಪಿಡಬ್ಲೂ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿಹೇಳಿದ ಸಂಗತಿಗಳಿಗೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಸದರಿಯವರು ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಪರಿಶೀಲಿಸಿದಾಗ ಪ್ರತಿವಾದಿ ಆತನ ಸಹೋದರ ಹಾಗೂ ಸಹೋದರಿಯರು ತಮ್ಮ ಕುಟುಂಬದ ಅಸ್ತಿಗಳಲ್ಲಿ ಪಾಲುಕೋರಿ ಇದೇ ನ್ಯಾಯಾಲಯದಲ್ಲಿ ಅಸಲ ದಾವಾ ನಂ. 14-2019 ನ್ನು ದಾಖಲಿಸಿದ್ದು ಸದರಿ ದಾವೆ ಡಿಕ್ರಿ ಆಗಿರುತ್ತದೆ. ಆದಾದ ನಂತರ ಎಫ್ ಡಿ ಪಿ ನಂ. 16-2022 ನ್ನು ದಾಖಲಿಸಿದ್ದು ಅದರಲ್ಲಿ ರಾಜಿ ಮಾಡಿಕೊಂಡಿರುತ್ತಾರೆ. ರಾಜಿ ಡಿಕ್ರಿ ಪ್ರಕಾರ ಪ್ರತಿವಾದಿಗೆ ದಾವಾ ಆಸ್ತಿಯನ್ನು ಆತನ ಪಾಲು ಎಂದು ಕೊಟ್ಟಿರುತ್ತಾರೆ ಎಂಬುದು ಅತ್ಯಂತ ಸ್ಪಷ್ಟವಾಗಿ ತಿಳಿದು ಬರುತ್ತದೆ. ಸದರಿ ಸಂಗತಿಯನ್ನು ಪ್ರತಿವಾದಿಯು ತನ್ನ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿರುತ್ತಾರೆ.

15. ಪ್ರತಿವಾದಿ ತನ್ನನ್ನು ಡಿಬ್ಲೂ-1 ಎಂದು ವಿಚಾರಣೆ ಮಾಡಿಕೊಂಡಿದ್ದು ತನ್ನ ಮುಖ್ಯ ವಿಚಾರಣೆಯಲ್ಲಿ ಪ್ರತಿವಾದ ಪತ್ರದಲ್ಲಿಯ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ. ತಮ್ಮ ವಾದಕ್ಕೆ ಪೂರಕವಾಗಿ ದಾಖಲೆಗಳನ್ನು

ಹಾಜರುಪಡಿಸಿರುತ್ತಾರೆ. ನಿಡಿ-1 ಮತ್ತು 2 ಗ್ರಾಮ ನಮೂನೆ ನಂ. 7, 7(ಅ) ಮತ್ತು 12ರ ಉತಾರಗಳು, ನಿಡಿ-3 ರಿಂದ 8 ಸರ್ವೆ ನಂ. 275, 278ರ ಪಹಣಿ ಪತ್ರಿಕೆಗಳು, ನಿಡಿ-9 ರಿಂದ 12 ಮ್ಯುಟೇಷನ್ ರಜಿಸ್ಟರಗಳು. ಪ್ರತಿವಾದಿ ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ಮೂಲತಃ ಸರ್ವೆ ನಂ. 74 ಎಂದು ದಾಖಲಾಗಿದ್ದು ಎಂದು ನಂತರ 275 ಎಂದು ಬದಲಾಗಿರುತ್ತದೆ. 1950-51 ರಿಂದ ಭೀಮಪ್ಪ ಫಕ್ಕೀರಪ್ಪ ಇವರ ಹೆಸರು ಕಬ್ಜೆದಾರ ಎಂದು ದಾಖಲಾಗಿದ್ದು 1999-2000 ರ ವರೆಗೆ ಸದರಿಯವರ ಹೆಸರು ಕಬ್ಜೆದಾರ ಅಥವಾ ಸ್ವಾ ಧೀನದಾರ ಮತ್ತು ಸಾಗುವಳಿದಾರರ ಕಾಲಂ ನಲ್ಲಿ ದಾಖಲಾಗಿರುತ್ತದೆ. ಸದರಿ ದಾಖಲೆಗಳಿಂದ ಮೇಲ್ನೋಟಕ್ಕೆ ದಾವಾ ಆಸ್ತಿ ಪ್ರತಿವಾದಿಯ ತಂದೆಗೆ ಸೇರಿರುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಸದರಿ ಸಂಗತಿಯನ್ನು ಪ್ರತಿವಾದಿಯು ಎಲ್ಲಿಯೂ ಅಲ್ಲಗಳೆದಿರುವುದಿಲ್ಲ. ತನ್ನ ಪಾಟೀಸವಾಲಿನಲ್ಲಿ ಕೂಡಾ ನಮ್ಮ ತಂದೆ ತಾಯಿಗೆ 5 ಜನ ಗಂಡು ಮಕ್ಕಳು 2 ಜನ ಹೆಣ್ಣು ಮಕ್ಕಳು. ಅಸಲ ದಾವಾ ನಂ. 14-2019 ರಂತೆ ಪಾಲು ಮಾಡಿಕೊಂಡಿದ್ದು ಪಾಲಿನಲ್ಲಿ 4 ಎಕರೆ 19 ಗುಂಟೆ ತನ್ನ ಪಾಲಿಗೆ ಬಂದಿರುತ್ತದೆ ಎಂಬುದನ್ನು ಒಪ್ಪಿ ಕೊಂಡಿರುತ್ತಾರೆ. ಇನ್ನುಳಿದಂತೆ 1ನೇ ವಾದಿ ಹಾಗೂ ಪ್ರತಿವಾದಿಯ ವೈವಾಹಿಕ ಜೀವನಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳಿದ್ದು ಸದರಿ ಸಂಗತಿಗಳು ದಾವೆಯ ವಿವಾದಾಂಶಕ್ಕೆ ಸಂಬಂಧಪಟ್ಟಿರುವುದಿಲ್ಲ ಆದ್ದರಿಂದ ಈ ಕುರಿತು ಚರ್ಚೆ ಅಪ್ರಸ್ತುತ.

16. ವಾದಿಯರ ಪರ ಹಾಗೂ ಪ್ರತಿವಾದಿ ಹಾಜರು ಪಡಿಸಿದ ಮೌಖಿಕ ಹಾಗೂ ದಸ್ತಾವೇಜು ಸಾಕ್ಷ್ಯದಿಂದ ದಾವಾ ಆಸ್ತಿ ಜಂಟಿ ಕುಟುಂಬದ ಪಿತ್ರಾರ್ಜಿತ ಆಸ್ತಿಯಾಗಿದ್ದು, ಪ್ರತಿವಾದಿಯ ಸಹೋದರಿ ಸಲ್ಲಿಸಿದ್ದದಾವೆ ಡಿಕ್ರಿಯಾಗಿದ್ದು ನಂತರ ಎಫಡಿಪಿ ನಂ.16/2022 ರನ್ನು ದಾಖಲಿಸಿದ್ದು ಅದರಲ್ಲಿ ಆದ ರಾಜೀ ಡಿಕ್ರಿ ಪ್ರಕಾರ ದಾವಾ ಆಸ್ತಿ ಪ್ರತಿವಾದಿ ಪಾಲಿಗೆ ಬಂದಿರುತ್ತದೆ ಎಂಬುದು ರುಜುವಾತಾಗುತ್ತದೆ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂಬುದನ್ನು ಪ್ರತಿವಾದಿಯು ಎಲ್ಲಿಯೂ ಅಲ್ಲಗಗಳೆದಿರುವುದಿಲ್ಲ ತನ್ನ ಪಾರ್ಟಿ ಸವಾಲಿನಲ್ಲಿಯೂ ಕೂಡ ದಾವಾ ಆಸ್ತಿ ಪಿತ್ರಾರ್ಜಿತ ಅಸ್ತಿ ಎಂಬುದನ್ನು ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ವಿವಾದಾಂಶ ನಂ.1 ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

17. **<u>ವಿವಾದಾಂಶ ನಂ 2:</u>** ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ವಾದಿಯರ ದಾವೆ ಅವಶ್ಯಕ ಪಕ್ಷಗಾರರನ್ನು ಸೇರಿಸದೇ ಇರುವುದರಿಂದ ವಿಚಾರಣೆಗೆ ಅರ್ಹವಲ್ಲ ಎಂದು ವಾದಿಸಿರುತ್ತಾರೆ. ತನ್ನ ವಾದಕ್ಕೆ ಪೂರಕವಾಗಿ ಪ್ರತಿವಾದ ಪತ್ರದಲ್ಲಿ 1ನೇ ವಾದಿಯು ತನ್ನನ್ನು ಬಿಟ್ಟು ಹೋಗಿದ್ದು ಬೇರೆ ವಿವಾಹ ಮಾಡಿಕೊಳ್ಳು ವಂತೆ ಹೇಳಿದ್ದರಿಂದ ಹಾಗೂ ವಯಸ್ಸಾದ ತಂದೆ ತಾಯಿಗಳನ್ನು ನೋಡಿಕೊಳ್ಳುವ ಸಲುವಾಗಿ ಹಾಗೂ ತನ್ನ ಊಟ ಉಪಚಾರದ ಸಲುವಾಗಿ ಮಂಜುಳಾ ಎಂಬುವವರನ್ನು ವಿವಾಹವಾಗಿದ್ದು ತಮ್ಮ ವೈವಾಹಿಕ ಜೀವನದಿಂದಾಗಿ

ಅಶ್ವಿನಿ ಮತ್ತು ಅಮೃತ ಎಂಬ ಎರಡು ಜನ ಹೆಣ್ಣು ಮಕ್ಕಳು ಜನಿಸಿರುತ್ತಾರೆ. ಸದರಿಯವರು ದಾವೆಯ ಅವಶ್ಯಕ ಪಕ್ಷಗಾರರಾಗಿದ್ದು ಅವರನ್ನು ಸೇರಿಸದೇ ಇರುವುದರಿಂದ ವಾದಿಯರ ದಾವೆ ವಿಚಾರಣೆಗೆ ಅರ್ಹವಲ್ಲ ಎಂದು ವಾದಿಸಿದ್ದಾರೆ. ತನ್ನ ಮುಖ್ಯ ವಿಚಾರಣೆಯಲ್ಲಿ ಕೂಡಾ ಸದರಿ ಸಂಗತಿಗಳನ್ನು ಪುನರುಚ್ಚರಿಸಿರುತ್ತಾರೆ. ತನ್ನ ವಾದಕ್ಕೆ ಪೂರಕವಾಗಿ ನಿಡಿ-13 ರಿಂದ 16 ದಾಖಲೆಗಳನ್ನು ಗುರುತಿಸಿಕೊಂಡಿದ್ದು ಅವುಗಳನ್ನು ಪರಿಶೀಲಿಸಲಾಗಿ ಸದರಿ ದಾಖಲೆಗಳು ಅಶ್ವಿನಿ ಬಸವರಾಜ ಧರೆಪ್ಪನವರ ಹಾಗೂ ಅಮೃತ ಬಸವರಾಜ ಧರೆಪ್ಪನವರ ಇವರ ವ್ಯಾಸಂಗ ಪ್ರಮಾಣ ಪತ್ರ ಹಾಗೂ ಜನನ ಪ್ರಮಾಣ ಪತ್ರಗಳಾಗಿದ್ದು ಸದರಿ ದಾಖಲೆಗಳಿಂದ ಪ್ರತಿವಾದಿ ಹಾಗೂ ಮಂಜುಳ ಇವರ ವೈವಾಹಿಕ ಜೀವನದಿಂದಾಗಿ ಅಶ್ವಿನಿ ಹಾಗೂ ಅಮೃತ ಎಂಬ ಎರಡು ಜನ ಮಕ್ಕಳು ಜನಿಸಿರುವುದು ಸ್ಪಷ್ಟವಾಗುತ್ತದೆ.

18. 1 ನೇ ವಾದಿಯ ಜೀವಿತ ಕಾಲದಲ್ಲಿ ಪ್ರತಿವಾದಿಯು ಮಂಜುಳ ಇವರನ್ನು ಕಾನೂನು ಬಾಹಿರವಾಗಿ ಮದುವೆಯಾಗಿರುತ್ತಾರೆ. 1 ನೇ ವಾದಿಯ ಅನುಮತಿ ಮೇರೆಗೆ ಪ್ರತಿವಾದಿ ಬೇರೆ ಮದುವೆ ಮಾಡಿಕೊಂಡಿದ್ದಾನೆಂದು ಪಿಡಬ್ಲೂ-1 ರವರಿಗೆ ಸೂಚಿಸಿದ್ದು ಅದನ್ನು ಅಲ್ಲಗಳೆದಿರುತ್ತಾರೆ. ಪ್ರತಿವಾದ ಪತ್ರದಲ್ಲಿ ತಿಳಿಸಿದಂತೆ ಪ್ರತಿವಾದಿಯು ಮಂಜುಳಾ ಎಂಬುವವರನ್ನು 2 ನೇ ಮದುವೆಯಾಗಿದ್ದು ಅವರಿಗೆ ಅಶ್ವಿನಿ ಮತ್ತು ಅಮೃತ ಎಂಬ ಮಕ್ಕಳು ಜನಿಸಿದ್ದಾರೆ ಎಂಬುದನ್ನು ಒಪ್ಪಿಕೊಂಡಿರುತ್ತಾರೆ. ಆದರೆ ಸದರಿ ಸಂಗತಿ ಸದರಿಯವರನ್ನು ದಾವೆಯಲ್ಲಿ ಸೇರಿಸದೇ ಇರುವುದರಿಂದ ದಾವೆ ವಿಚಾರಣೆಗೆ ಅರ್ಹವಲ್ಲ ಎಂದು ವಜಾ ಮಾಡಲು ಬರುವುದಿಲ್ಲ. 1 ನೇ ವಾದಿ ಹಾಗೂ ಪ್ರತಿವಾದಿಯ ಮಧ್ಯ ಕಾನೂನು ಬದ್ಧವಾಗಿ ವಿಚ್ಛೇದನೆ ಆಗಿರುವುದಿಲ್ಲ. 1 ನೇ ವಾದಿಯ ಜೀವಿತ ಕಾಲದಲ್ಲಿ ಪ್ರತಿವಾದಿಯು ಕಾನೂನು ಬಾಹಿರವಾಗಿ 2 ನೇ ಮದುವೆಯಾಗಿದ್ದು ಅವರ ವೈವಾಹಿಕ ಜೀವನದಿಂದಾಗಿ 2 ಜನ ಹೆಣ್ಣು ಮಕ್ಕಳು ಜನಿಸಿರುತ್ತಾರೆ. ಪ್ರತಿವಾದಿಯ ಕಾನೂನು ಬಾಹಿರ ಮದುವೆಯಿಂದ ಜನಿಸಿದ ಮಕ್ಕಳು ತಂದೆಯ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಪಡೆದುಕೊಳ್ಳಲು ಹಕ್ಕುದಾರರಲ್ಲ. ಆದ್ದರಿಂದ ಪ್ರತಿವಾದಿಯ ಕಾನೂನು ಬಾಹಿರ ಮದುವೆಯಿಂದ ಜನಿಸಿದ ಮಕ್ಕಳು ದಾವೆಗೆ ಅವಶ್ಯಕ ಪಕ್ಷಗಾರರಲ್ಲ. ಹೀಗಾಗಿ ವಿವಾದಾಂಶ 2 ನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

19. **<u>ವಿವಾದಂಶ ನಂ.3</u>:** ವಾದಿಯರು ದಾವಾ ಆಸ್ತಿಗಳಲ್ಲಿಯ ಪಾಲು ಕೋರಿ ದಾವೆ ಸಲ್ಲಿಸಿರುತ್ತಾರೆ. ಈ ಮೇಲೆ ಚರ್ಚಿಸಿದಂತೆ 1 ನೇ ವಾದಿಯು ಪ್ರತಿವಾದಿಯ ಕಾನೂನು ಬದ್ಧ ಹೆಂಡತಿಯಾಗಿದ್ದು ಸದರಿಯವರ ವೈವಾಹಿಕ ಜೀವನದಿಂದಾಗಿ 2 ನೇ ವಾದಿ ಜನಿಸಿರುತ್ತಾರೆ. ದಾವಾ ಆಸ್ತಿಗಳು ಜಂಟಿ ಕುಟುಂಬದ ಪಿತ್ರಾರ್ಜಿತ ಆಸ್ತಿಗಳು ಎಂಬುದನ್ನು ಪ್ರತಿವಾದಿ ಎಲ್ಲಿಯೂ ಅಲ್ಲಗಳೆದಿರುವುದಿಲ್ಲ. ಪ್ರತಿವಾದಿ ಹಾಜರು ಪಡಿಸಿದ ದಾಖಲೆಗಳಿಂದ ದಾವಾ ಆಸ್ತಿ ಮೂಲತಃ ಪ್ರತಿವಾದಿಯ

ತಂದೆಗೆ ಸೇರಿದ್ದು ಅವರ ಮರಣಾನಂತರ ದಾವಾ ಆಸ್ತಿ ಹಾಗೂ ಇತರೇ ಆಸ್ತಿಗಳು ಬಂದಿರುತ್ತವೆ. ಪ್ರತಿವಾದಿಯ ಸಹೋದರಿ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ನಂ. 14/2019 ನ್ನು ಸಲ್ಲಿಸಿದ್ದು ಅದರ ಪ್ರಕಾರ ಎಫ್ ಡಿ ಪಿ 16/2022 ನ್ನು ಸಲ್ಲಿಸಿದ್ದು ದಿಃ 11-2-2023 ರಂದು ಸದರಿ ಪ್ರಕರಣದಲ್ಲಿ ರಾಜಿ ಮಾಡಿಕೊಂಡಿರುತ್ತಾರೆ. ರಾಜೀ ಪ್ರಕಾರ ದಾವಾ ಆಸ್ತಿ ಪ್ರತಿವಾದಿಯ ಹಿಸ್ಸೆಗೆ ಬಂದಿರುತ್ತದೆ.

20. 1 ನೇ ವಾದಿಯು ಪ್ರತಿವಾದಿಯ ಹೆಂಡತಿಯಾಗಿದ್ದು, ತನ್ನ ಗಂಡನ ಜೀವಿತ ಕಾಲದಲ್ಲಿ ದಾವಾ ಅಸ್ತಿಯಲ್ಲಿ ಪಾಲು ಪಡೆದುಕೊಳ್ಳಲು ಹಕ್ಕುದಾರಳಲ್ಲ. ಅದೇ ರೀತಿ ಪ್ರತಿವಾದಿಯ 2 ನೇ ಹೆಂಡತಿ ಮಂಜುಳಾ ಹಾಗೂ ಅವರಿಗೆ ಜನಿಸಿದ ಮಕ್ಕಳು ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಪಡೆದುಕೊಳ್ಳಲು ಹಕ್ಕುದಾರರಲ್ಲ. ದಾವಾ ಆಸ್ತಿಯು 2 ನೇ ವಾದಿ ಹಾಗೂ ಪ್ರತಿವಾದಿಯ ಪಿತ್ರಾರ್ಜಿತ ಅಸ್ತಿಯಾಗಿದ್ದು ಅದರಲ್ಲಿ ಸಮ ಪಾಲು ಪಡೆದುಕೊಳ್ಳಲು ಹಕ್ಕುದಾರರು. 2 ನೇ ವಾದಿ ದಾವಾ ಆಸ್ತಿಯಲ್ಲಿ ಅರ್ಧ ಪಾಲು ಹಾಗೂ ಪ್ರತಿವಾದಿ ಅರ್ಧ ಪಾಲು ಪಡೆದುಕೊಳ್ಳಲು ಹಕ್ಕುದಾರರು. ಆದ್ದರಿಂದ ವಿವಾದಂಶ ನಂ. 3 ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

21. **<u>ವಿವಾದಾಂಶ ನಂ.</u>4:** ಈ ಮೇಲೆ ಚರ್ಚಿಸಿದ ಕಾರಣಗಳಿಗಾಗಿ ಅಂತಿಮವಾಗಿ ಈ ಕೆಳಗಿನಂತೆ :

## <u>ಆದೇಶ</u>

ವಾದಿಯರು ಸಲ್ಲಿಸಿದ ದಾವೆಯನ್ನು ಡಿಕ್ರಿ ಮಾಡಲಾಗಿದೆ.

ಈ ಮೂಲಕ 2 ನೇ ವಾದಿಯು ದಾವಾ ಆಸ್ತಿಯಲ್ಲಿ ಸರಸ-ನಿರಸ ½ ಪಾಲು ಪಡೆದುಕೊಳ್ಳಲು ಹಕ್ಕುದಾರರು ಎಂದು ಘೋಷಿಸಲಾಗಿದೆ.

ಪ್ರತಿವಾದಿಯು ದಾವಾ ಆಸ್ತಿಯಲ್ಲಿ ½ ಪಾಲು ಪಡೆದುಕೊಳ್ಳಲು ಹಕ್ಕುದಾರ ಎಂದು ಘೋಷಿಸಲಾಗಿದೆ, ಪ್ರತಿವಾದಿಯು ತನ್ನ ಪಾಲಿನ ನ್ಯಾಯಾಲಯದ ಶುಲ್ಕ ಪಾವತಿಸಿದ ನಂತರ ಆತನ ಪಾಲಿನ ಡಿಕ್ರಿ ರಚಿಸಲು ಆದೇಶಿಸಲಾಗಿದೆ.

ಕಚೇರಿಯವರು ಆದೇಶಿಸಿದಂತೆ ಪ್ರಾಥಮಿಕ ಡಿಕ್ರಿ ರಚಿಸುವಂತೆ ಸೂಚಿಸಲಾಗಿದೆ.

(ಶ್ರೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಅಭಿಲೇಖನ ನೀಡಿ ಅಭಿಲೇಖನವಾದ ನಂತರ ತಿದ್ದುಪಡಿ ಮಾಡಿ ತೆರೆದ ನ್ಯಾಯಾಲದಲ್ಲಿ ದಿನಾಂಕಃ 10 ನೇ ಆಗಷ್ಟ 2026 ರಂದು ಉದ್ಘೋಷಿಸಿರುತ್ತೇನೆ.)

**(ಆರ್.ಎಲ್. ಹೋನೋಲೆ)**

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಕಲಘಟಗಿ.

**ಅಸಲ ದಾವಾ ನಂ. ೮೩/೨೦೨೪**

**ಅನುಭಂದ**

1. ವಾದಿಗಳ ಪರ ನೀಡಿದ ಸಾಕ್ಷಿಗಳ ಪಟ್ಟಿ:

ಪ್ರಾಸಾ-1: ಶ್ರೀಮತಿ ಗಾಯತ್ರಿ ಕೋಂ ಬಸವರಾಜ ಧರೆಪ್ಪನವರ @ ಹೂಲಿಕಟ್ಟಿ

2. ವಾದಿಗಳ ಪರ ನೀಡಿದ ದಾಖಲೆಗಳ ಪಟ್ಟಿ:

| | | |
|---|---|---|
| ನಿಪಿ- 1 | : | ಪಹಣಿ ಪತ್ರಿಕೆ |
| ನಿಪಿ- 2 | : | ಮ್ಯುಟೇಷನ ಪ್ರತಿ |
| ನಿಪಿ- 3 | : | ಅಸಲು ದಾವಾ ನಂ.16/2022 ರ ಅರ್ಜಿ ಪ್ರತಿ |
| ನಿಪಿ- 4 | : | ಆರ್ಡರ್ ಶೀಟ |
| ನಿಪಿ- 5 | : | ಎಫ್ ಡಿ ಪಿ ಪ್ರತಿ |
| ನಿಪಿ- 6 | : | ರಾಜೀ ಅರ್ಜಿ ಪ್ರತಿ |
| ನಿಪಿ- 7 | : | ಕಂದಾಯ ಅಧಿಕಾರಿಗಳು ನೀಡಿದ ಜೀವಂತ ಸದಸ್ಯರ ದೃಡಿಕರಣ ಪತ್ರ |
| ನಿಪಿ- 8 | : | ಗಂಭಾಪೂರ ಗ್ರಾಮ ಪಂಚಾಯತಿ ಅವರ ನೀಡಿದ ಪ್ರಮಾಣ ಪತ್ರ |
| ನಿಪಿ- 9 | : | 2 ನೇ ವಾದಿಯ ಜನನ ಪ್ರಮಾಣ ಪತ್ರ |
| ನಿಪಿ- 10 | : | ಮಕ್ಕಳ ಆರೈಕೆಯ ಪುಸ್ತಕ |
| ನಿಪಿ- 11 | : | ಪರೀಕ್ಷಾ ವರದಿ |
| ನಿಪಿ- 12 | : | ಮಾನಸಿಕ ಕೇಂದ್ರುದವರು ನೀಡಿದ ಮಾಹಿತಿ ಪತ್ರ |
| ನಿಪಿ- 13 | : | ರಶೀದಿಗಳು(4) |
| ನಿಪಿ- 14 ರಿಂದ 16 | : | 2 ನೇ ವಾದಿಯ ಪೋಟೊಗಳು |
| ನಿಪಿ- 17 ರಿಂದ 21 | : | ಶಾಲೆಯ ಫೀ ರಶೀದಿ |
| ನಿಪಿ- 22 ರಿಂದ 24 | : | ಆಸ್ಪತ್ರೆಯವರು ನೀಡಿದ ರಶೀದಿ |
| ನಿಪಿ- 25 | : | ಕಣ್ಣಿನ ಆಸ್ಪತ್ರೆ ವರದಿ |
| ನಿಪಿ- 26 | : | ಔಷದಿ ಚೀಟಿ |
| ನಿಪಿ- 27 | : | ಎಸ್ ಡಿ ಎಮ್ ಆಸ್ಪತ್ರೆಯ ನೋಂದಣಿ ಪತ್ರ |
| ನಿಪಿ- 28 | : | ಮನವಿ ಪತ್ರ |
| ನಿಪಿ- 29 | : | ಜಾಹಿರಾತು ಪತ್ರ |
| ನಿಪಿ- 30 | : | ನೋಂದಣಿ ಪತ್ರ |
| ನಿಪಿ- 31 | : | ಅರ್ಜಿಯ ಪ್ರತಿ |

3. ಪ್ರತಿವಾದಿಯರ ಪರ ಗುರುತಿಸಲಾದ ಸಾಕ್ಷಿಗಳ ಪಟ್ಟಿಃ

ಬಸವರಾಜ ತಂದೆ ಭೀಮಪ್ಪ ಧರೆಪ್ಪನವರ @ ಹೂಲಿಕಟ್ಟಿ

4. ಪ್ರತಿವಾದಿಯರ ಪರ ಗುರುತಿಸಲಾದ ದಾಖಲೆಗಳ ಪಟ್ಟಿಃ

| | |
|---|---|
| ನಿಡಿ- 1 ಮತ್ತು 2 | :ಗ್ರಾಮ ನಮೂನೆ ನಂ.7 7(ಎ) ಮತ್ತು 12 ರ ಪ್ರತಿಗಳು |
| ನಿಡಿ- 3 ರಿಂದ 8 | :ಪಹಣಿ ಪತ್ರಿಕೆಗಳು |
| ನಿಡಿ- 9 ರಿಂದ 12 | :ಹಕ್ಕು ಪತ್ರಿಕೆಗಳು |
| ನಿಡಿ- 13 ಮತ್ತು 14 | :ವ್ಯಾಸಾಂಗ ಪ್ರಮಾಣ ಪತ್ರಗಳು |
| ನಿಡಿ- 15 | :ಅಶ್ವಿನಿ ಇವರ ಜನನ ಪ್ರಮಾಣ ಪತ್ರ |
| ನಿಡಿ- 16 | :ಅಮೃತಇವರ ಜನನ ಪ್ರಮಾಣ ಪತ್ರ |

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕಲಘಟಗಿ.